# ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ)


ನಂ. 5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560004.

ರಿ.ನಂ. 171/1928–29, ದೂರವಾಣಿ: 080–22425746

Email : ksksanga@gmail.com, Website : www.kuruhinasetty.sanga.org


ಕು.ಶೆ.ಕೇ.ಕ್ರ.ಸಂ. : 49/2024–25 ದಿನಾಂಕ : 07–12–2024

ಸನ್ಮಾನ್ಯ ಸದಸ್ಯರೇ,

## 31ನೇ ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆ

ದಿನಾಂಕ 29–12–2024ರ ಭಾನುವಾರ ಬೆಳಗ್ಗೆ 10–00 ಘಂಟೆಗೆ "ಕುರುಹಿನಶೆಟ್ಟಿ ಕೇಂದ್ರ ಸಂಘ" ನಂ.5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, (ಹೊಸ ಪ್ರೌಢಶಾಲೆ ರಸ್ತೆ) ವಿಶ್ವೇಶ್ವರಪುರಂ, ಬೆಂಗಳೂರು–560004 ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಅಂಬಾದಾಸ್ ವಿ. ಕಾಮೂರ್ತಿ ರವರ ಅಧ್ಯಕ್ಷತೆಯಲ್ಲಿ 31ನೇ ಸರ್ವಸದಸ್ಯರ ಸಭೆಯನ್ನು ಏರ್ಪಡಿಸಲಾಗಿದೆ. ದಯಮಾಡಿ ಸಭೆಗೆ ಆಗಮಿಸಿ, ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ,
ಸಹಿ/–
(ಬಿ.ಎಸ್. ಲಿಂಗರಾಜು)
ಪ್ರಧಾನ ಕಾರ್ಯದರ್ಶಿ

## ಕಾರ್ಯಕ್ರಮಗಳು

1) ಪ್ರಾರ್ಥನೆ
2) ಸ್ವಾಗತ
3) ದಿವಂಗತ ಸದಸ್ಯರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ
4) ದಿನಾಂಕ 29–12–2024ರ ಭಾನುವಾರ ನಡೆಯುವ 31ನೇ ಸರ್ವಸದಸ್ಯರ ಕರೆಯೋಲೆಯನ್ನು ಓದಿ ದಾಖಲು ಮಾಡುವುದು.
5) 24–12–2023 ರಂದು ನಡೆದ ಸಂಘದ 30ನೇ ಸರ್ವಸದಸ್ಯರ ಸಭೆಯ ನಡಾವಳಿಯನ್ನು ದೃಢೀಕರಿಸುವುದು.
6) 2023–2024ನೇ ಸಾಲಿನ ವರದಿಗೆ ಅನುಮೋದನೆ.
7) ಲೆಕ್ಕ ಪರಿಶೋಧಕರಿಂದ ಪರಿಶೋಧನೆಯಾದ 2023–2024ನೇ ಸಾಲಿನ ಲೆಕ್ಕಪತ್ರಗಳನ್ನು ಅಂಗೀಕರಿಸುವುದು.
8) 2024–25ನೇ ಸಾಲಿನ ಅಂದಾಜು ಆಯ–ವ್ಯಯಗಳನ್ನು ಅಂಗೀಕರಿಸುವುದು.
9) ಸಂಘದ ನವ ಕಟ್ಟಡಕ್ಕೆ ಬಿ.ಬಿ.ಎಂ.ಪಿ. ಅನುಮತಿ ನೀಡಿರುವ ಹಾಗೂ ರಾಜ್ಯ ಸರ್ಕಾರದ 2 ಕೋಟಿ ರೂ. ಅನುದಾನದ ಬಗ್ಗೆ.
10) 2025–2030 ಅಡಳಿತ ಮಂಡಳಿ ಚುನಾವಣೆ ನಡೆಸುವುದರ ಬಗ್ಗೆ.
11) ಇತರೆ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ.
12) ವಂದನಾರ್ಪಣೆ.

### ವಿಶೇಷ ಸೂಚನೆ :

1. ಸಂಘದ ಲೆಕ್ಕಪತ್ರಗಳ ಬಗ್ಗೆ ಹಾಗೂ ಇನ್ನಾವುದಾದರೂ ವಿಷಯವನ್ನು ಸಭೆಯಲ್ಲಿ ಚರ್ಚಿಸ ಬೇಕೆಂದಿದ್ದರೆ ದಯಮಾಡಿ ದಿನಾಂಕ 25–12–2024 ರಂದು ಬರೆದು ತಿಳಿಸತಕ್ಕದ್ದು.
2. ಸರ್ವಸದಸ್ಯರ ಸಭಾ ಪ್ರವೇಶಕ್ಕೆ ಗುರುತಿನ ಚೀಟಿ ಕಡ್ಡಾಯವಾದ್ದರಿಂದ ದಿನಾಂಕ 07–12–2024 ರವರೆಗೆ ಸಂಘದ ಸದಸ್ಯತ್ವ ಪಡೆದಿರುವ ಸದಸ್ಯರು ಗುರುತಿನ ಚೀಟಿಯೊಡನೆ ಬರಬೇಕಾಗಿ ಕೋರಲಾಗಿದೆ. ಗುರುತಿನ ಚೀಟಿ ಪಡೆಯದೆ ಇರುವ ಸದಸ್ಯರು ತಮ್ಮ ಇತ್ತೀಚಿನ ಅಂಚೆ ಚೀಟಿ ಅಳತೆಯ 2 ಭಾವಚಿತ್ರಗಳನ್ನು ಕೇಂದ್ರ ಸಂಘಕ್ಕೆ ನೀಡಿ ಗುರುತಿನ ಚೀಟಿಯನ್ನು ಸರ್ವಸದಸ್ಯರ ಸಭೆಯ ಮುನ್ನವೇ ಪಡೆಯತಕ್ಕದ್ದು.
3. ದಿನಾಂಕ 24–12–2023 ರಂದು 30ನೇ ಸರ್ವಸದಸ್ಯರ ಸಭೆಯ ನಡಾವಳಿ ಮತ್ತು ಸಂಘದ 2023–24 ನೇ ಸಾಲಿನ ವರದಿ ಆಡಿಟ್ ಆದ ಲೆಕ್ಕಪತ್ರ ವಿವರಗಳ ಮುದ್ರಿತ ಪುಸ್ತಕವನ್ನು ದಿನಾಂಕ 18–12–2024 ರಿಂದ ಕೇಂದ್ರ ಸಂಘದ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. (ವರದಿ ಪುಸ್ತಕಗಳನ್ನು ಸಮಾಜದ ಸ್ಥಳೀಯ ಸಂಘ / ಸಂಸ್ಥೆಗಳಿಗೂ ಕಳುಹಿಸಿ ಕೊಡಲಾಗಿದ್ದು ಅಲ್ಲಿಯೂ ಸಹ ಪರಾಮರ್ಶಿಸಬಹುದು.)
4. ಕಾರ್ಯಕ್ರಮದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಹಾಗೂ ಯೋಜಿತ ರೀತಿಯಲ್ಲಿ ನಿರ್ವಹಿಸುವ ಸಲುವಾಗಿ ರೂಪಿಸಿರುವ ಮೇಲ್ಕಂಡ ಸೂಚನೆಗಳ ಪರಿಪಾಲನೆಗೆ ಸದಸ್ಯರು ಸಹಕರಿಸಬೇಕೆಂದು ಪ್ರಾರ್ಥನೆ.

**ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ.)**

# 5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, (ಹೊಸ ಪ್ರೌಢಶಾಲೆ ರಸ್ತೆ),
ವಿಶ್ವೇಶ್ವರಪುರಂ, ಬೆಂಗಳೂರು

5 6 0 0 0 4